**ಸಾಕ್ಷಿಯನ್ನು ದಿಃ 13.10.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀಮತಿ ಕೆ.ಎಲ್.ಎಸ್ ವಕೀಲರಿಂದಃ**

ನನಗೆ ಬಾಲ್ಯದಿಂದಲೂ ಪವನ್ ಪರಿಚಿತ. ಅಪಘಾತ ಸ್ಥಳದಲ್ಲಿ ರಸ್ತೆ ಚೆನ್ನಾಗಿ ಕಾಣಿಸಿಸುತ್ತಿತು ಎಂದರೆ ಸರಿ. ಮುಂದೆ ಹೋಗುತ್ತಿದ್ದ ವಾಹನಕ್ಕೂ ಟಿಪ್ಪರ್ ವಾಹನಕ್ಕೂ ನಡುವೆ ಅಂತರ ಇರಲಿಲ್ಲ ಎಂದರೆ ಸರಿ. ಆದ ಕಾರಣ ಅಪಘಾತಕ್ಕೆ ಬೈಕ್ ಸವಾರನ ನಿರ್ಲಕ್ಷ್ಯತನ ಕಾರಣ ಎಂದರೆ ಸರಿಯಲ್ಲ. ಆದ ಕಾರಣ ಅಪಘಾತ ಆದ ದಿನವೇ ಪೋಲೀಸರಿಗೆ ದೂರು ನೀಡಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ವೈಧ್ಯಕೀಯ ದಾಖಲೆಗಳಲ್ಲಿ ಕೇವಲ ಆರ್.ಟಿ.ಎ ಎಂದು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. ಮೃತ ನನ್ನ ಸ್ನೇಹಿತನಾದ ಕಾರಣ ಹಾಗೂ ನನಗೆ ಪರಿಹಾರ ಸಿಗಲಿ ಎಂಬ ಕಾರಣಕ್ಕಾಗಿ ಮೃತನ ತಪ್ಪಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ನಂತರ ಕೆ.ಆರ್ ನಗರ ಹಾಗೂ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖನಾಗಿರುತ್ತೇನೆ ಎಂದರೆ ಈಗಲೂ ತೊಂದರೆ ಇದೆ ಎಂದು ಉತ್ತರಿಸಿರುತ್ತಾರೆ. ಆಸ್ಪತ್ರೆಗೆ ಬೇಟಿ ಕೊಟ್ಟ ಬಗೆಗಿನ ದಾಖಲೆಗಳನ್ನು ನಾನು ಹಾಜರು ಪಡಿಸಿದ್ದೇನೆ. ಔಷಧಿ ಬಿಲ್ಲುಗಳಿಗೆ ಸಂಬಂಧಿಸಿದ ಸಲಹ ಚೀಟಿಗಳು ನನ್ನ ಬಳಿ ಇಲ್ಲ. ಜೂನ್ 2024 ರ ನಂತರದ ಬಿಲ್ಲುಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ.

2. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ನಾನು ಪುನಃ ಆಸ್ಪತ್ರೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಕೊನೆಯ ಬಾರಿ ಒಂದು ತಿಂಗಳ ಹಿಂದೆ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಪ್ರಶ್ನೆಗಳನ್ನು ಅರ್ಥ ಮಾಡಿಕೊಂಡು ಅಪಘಾತದ ದಿನದ ಘಟನೆಗಳನ್ನು ನೆನಸಿಕೊಂಡು ಸ್ವಂತಃ ಸಾಕ್ಷಿ ಹೇಳುತ್ತಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವಷ್ಟು ನನಗೆ ಸಮಸ್ಯೆ ಇಲ್ಲ ಎಂದರೆ ಸರಿಯಲ್ಲ. ಅಪಘಾತ ಪೂರ್ವದಲ್ಲಿ ಟಿಪ್ಪರ್ ಲಾರಿ ಹೇಗೆ ಬರುತ್ತಿತ್ತು ಎಂದು ನನ್ನಿಂದ ಹೇಳಲಾಗುವುದಿಲ್ಲ ಎಂದರೆ ಸಾಕ್ಷಿಯು ಅದು ನಮ್ಮನ್ನು ಓವರ್ ಟೇಕ್ ಮಾಡಿಕೊಂಡು ಮುಂದೆ ಬಂದಿದೆ ಎನ್ನುತ್ತಾರೆ. ನನಗೆ ಜಮೀನು ಇದೆ. ನಾನು ವ್ಯವಸಾಯ ಮಾಡಿಕೊಂಡಿದ್ದೇನೆ. ಅದರಲ್ಲಿ

ಈ ವರ್ಷ ಬೆಳೆ ಬೆಳೆದಿಲ್ಲ. ಆರ್.ಟಿ.ಸಿ ಹಾಜರು ಪಡಿಸಲು ತೊಂದರೆ ಇಲ್ಲ. ರೂ. 30,000/- ಸಂಪಾದಿಸುತ್ತಿದ್ದ ಬಗ್ಗೆ ದಾಖಲೆ ಇಲ್ಲ. ನಾವು ಕರೆದವರ ಬಳಿ ಹೋಗಿ ಕೆಲಸ ಮಾಡುತ್ತಿದ್ದೇವು. ರೂ. 30,000/- ಸಂಪಾದನೆ ಮಾಡುತ್ತಿದ್ದೆ ಎಂದು ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಬರೆಸಿರುವ ಪ್ರಮಾಣದಲ್ಲಿ ನಾನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಖರ್ಚುಗಳನ್ನು ತೋರಿಸಲು ದಾಖಲೆ ಇಲ್ಲ ಎಂದರೆ ಸರಿ. ಹೆಚ್ಚಿನ ಪರಿಹಾರ ಪಡೆಯಲು ಆ ರೀತಿ ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನಮ್ಮ ತಪ್ಪು ಇರುವ ಕಾರಣ ನಾವು ಕೇಳಿರುವ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.